# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಇಂಗ್ಲಂಡಿನ ಲೀಸೆಸ್ಟರ್ ನಗರದಲ್ಲಿ ರಥೋತ್ಸವ ಪ್ರಯುಕ್ತ ವಿಜೃಂಭಣೆಯಿಂದ ನಡೆದ ರಥಯಾತ್ರೆ


ಸಂಪುಟ : 46 | ಸಂಚಿಕೆ : 06 | ಜ್ಯೇಷ್ಠ–ಆಷಾಢ | ಕಲಿಯುಗಾಬ್ದ 5126 | 15–07–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಕಾರ್ಗಿಲ್ ವಿಜಯೋತ್ಸವಕ್ಕೆ 25ರ ಸಂಭ್ರಮ



ಭಾರತದ ಶೌರ್ಯ ಪರಂಪರೆಯ ಇತಿಹಾಸವನ್ನು ಗಮನಿಸಿದಾಗ ಅಸಂಖ್ಯ ಘಟನೆಗಳು ಕಣ್ಣ ಮುಂದೆ ಬರುತ್ತವೆ. ಇಂತಹ ಹೋರಾಟಗಳ ಸಾಲಿನಲ್ಲಿ ಸೈನಿಕರ ತ್ಯಾಗ, ಪರಾಕ್ರಮ ಬಲಿದಾನವನ್ನು ಸಾರುವ ಮಹತ್ತರದ ಅಧ್ಯಾಯಗಳಲ್ಲೊಂದಾಗಿ ನಿಲ್ಲುವುದು ‘ಕಾರ್ಗಿಲ್ ವಿಜಯ’. ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ವಿಷಮ ಪರಿಸ್ಥಿತಿಯಲ್ಲಿ ನಿಂತು ಯುದ್ಧವನ್ನು ಎದುರಿಸಿ ಪಡೆದ ಶ್ರೇಷ್ಠ ವಿಜಯಕ್ಕೆ ಇದೀಗ 25 ವಸಂತಗಳ ಸಂಭ್ರಮ.

ಸ್ನೇಹ ಹಸ್ತ ಚಾಚಿ ಸಹೋದರತ್ವವನ್ನು ಬಯಸಿದ ಭಾರತಕ್ಕೆ ಪಾಕಿಸ್ತಾನ ಮಾಡಿದ ವಂಚನೆಗೆ ಸೆಡ್ಡು ಹೊಡೆದು ಭಾರತಾಂಬೆಯ ಮುಕುಟ ರಕ್ಷಿಸಿದ ನಮ್ಮ ಸೈನಿಕರ ವೀರಗಾಥೆಯಿದು. ಒಂದು ಕಡೆಯಲ್ಲಿ ಅಮೇರಿಕಾ, ಚೀನಾದಂತಹ ದೇಶಗಳ ನಿರಂತರ ಒತ್ತಡ, ಬಹುಮತವಿಲ್ಲದ ಮೈತ್ರಿ ಸರಕಾರದ ಕಾಲಘಟ್ಟ, ಆರ್ಥಿಕವಾಗಿ ಭಾರತವಿನ್ನೂ ಸಬಲವಿಲ್ಲದ ಸಮಯ, ಸೈನಿಕರ ಕೈಯಲ್ಲೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಲ್ಲದ ಸಂದರ್ಭ, ಇವೆಲ್ಲದಕ್ಕಿಂತಲೂ ಮಿಗಿಲಾಗಿ -40° ಇರುವ ಶಿಖರಗಳ ಮೇಲೆ ಪಾಕಿಸ್ತಾನದ ಸೈನ್ಯ ಶಸ್ತ್ರ ಸಜ್ಜಿತವಾಗಿ ನಿಂತು ಭಾರತೀಯ ಯೋಧರ ಮೇಲೆ ದಾಳಿಗಾಗಿ ಕಾಯುತ್ತಿದ್ದ ಗಳಿಗೆ. ಹಲವು ಇಲ್ಲಗಳ ಮಧ್ಯೆ ಎಲ್ಲವನ್ನು ಸಾಧಿಸಿದ ನಮ್ಮ ಸೈನಿಕರ ಅಮೋಘ ಸಾಮರ್ಥ್ಯದ ಸ್ಮರಣೆ ನಮ್ಮ ಕರ್ತವ್ಯ.

**ಕಾರ್ಗಿಲ್ ಯುದ್ಧದ ಹಿನ್ನೆಲೆ:** ಮೇ 11,1998 ಜಗತ್ತಿನ ಮುಂದೆ ಭಾರತದ ವಿಶ್ವರೂಪ ದರ್ಶನ ಪ್ರಕಟಗೊಂಡ ಸುವರ್ಣ ಗಳಿಗೆ. ರಾಜಸ್ಥಾನದ ಥಾರ್ ಮರುಭೂಮಿಯ ಪೋಕ್ರಾನ್‌ನಲ್ಲಿ ಅಣು ಪರೀಕ್ಷೆ ನಡೆಸಿ ಸಫಲವಾಗಿತ್ತು. ತಮ್ಮನ್ನು ತಾವು ವಿಶ್ವದ ಶಕ್ತಿಶಾಲಿ ರಾಷ್ಟ್ರಗಳು ಎಂದು ಕರೆದುಕೊಳ್ಳುತ್ತಿದ್ದ ಹಲವು ದೇಶಗಳು ಭಾರತದ ಅಣುಪರೀಕ್ಷೆಯಿಂದ ಬೆರಗಾಗಿದ್ದವು. ಅಮೆರಿಕಾವಂತೂ ತನ್ನ ಅಂತರಾಷ್ಟ್ರೀಯ ಬಲವನ್ನು ಬಳಸಿ, ಒತ್ತಡಗಳ ಮೂಲಕ ಭಾರತದ ಹೊಸ ಪರ್ವಕ್ಕೆ ತೊಡಕ್ಕುಂಟು ಮಾಡಲು ಹಪಹಪಿಸುತ್ತಿತ್ತು. ಆದರೆ ಆ ಸಂದರ್ಭದಲ್ಲಿ ಭಾರತದ ಸಾರಥ್ಯ ವಹಿಸಿದ್ದ ಅಟಲ್ ಬಿಹಾರಿ ವಾಜಪೇಯಿ ಅವರು ಯಾವ ಒತ್ತಡಕ್ಕೂ ಮಣಿಯದೆ ಅದ್ಭುತವಾಗಿ ದೇಶವನ್ನು ಮುನ್ನಡೆಸಿದರು. ಈ ಐತಿಹಾಸಿಕ ಮೈಲಿಗಲ್ಲಿಗೆ ವರ್ಷ ತುಂಬುವುದರೊಳಗೆ ಪಾಕಿಸ್ತಾನ ಮತ್ತೊಮ್ಮೆ ಭಾರತದ ಮೇಲೆ ಯುದ್ಧವನ್ನು ಸಾರಿತು.

ಭಾರತ–ಪಾಕ್ ನಡುವಿನ ಸಂಬಂಧ ವೃದ್ಧಿಗಾಗಿ ಫೆಬ್ರವರಿ 19, 1999 ರಂದು ಭಾರತದಿಂದ ಲಾಹೋರ್‌ಗೆ ಬಸ್ ಯಾತ್ರೆ ನಡೆಸಿ ಸಹೋದರತ್ವದ ಸಂದೇಶವನ್ನು ಈ ನಾಡಿನ ಸರ್ಕಾರ ಜಗತ್ತಿಗೆ ಸಾರಿದರು. ಇತ್ತ ಭಾರತದ ಪ್ರಧಾನಿ ಸ್ನೇಹಹಸ್ತವನ್ನು ನೀಡಿ ಬಾಂಧವ್ಯವೃದ್ಧಿಗೆ ಶ್ರಮಿಸುತ್ತಿದ್ದರೆ, ಅತ್ತ ಲಡಾಖ್ ಹಾಗೂ ಕಾಶ್ಮೀರವನ್ನು ಪಡೆಯುವುದೇ ತನ್ನ ಜೀವನದ ಪರಮಧ್ಯೇಯವಾಗಿರಿಸಿಕೊಂಡಿದ್ದ ಪಾಕಿಸ್ತಾನದ ಸೇನಾ ಮುಖ್ಯಸ್ಥ ಪರ್ವೇಜ್ ಮುಶ್ರಫ್ ಕಾರ್ಗಿಲ್ ಮೂಲಕ ಭಾರತದ ಮೇಲೆ ದಾಳಿಗೆ ಸಿದ್ಧನಾಗಿ ನಿಂತಿದ್ದ.

**ಒಪ್ಪಂದ ಮುರಿದ ಪಾಕಿಸ್ತಾನ:** ಭಾರತದ ಗಡಿ ನಿಯಂತ್ರಣ ರೇಖೆಯ ಭಾಗದಲ್ಲಿ ಪರ್ವತದ ಸಾಲುಗಳಿವೆ. ಎರಡು ರಾಷ್ಟ್ರಗಳ ಸೈನಿಕರು ತಮಗೆ ಸೇರಿದ ಪರ್ವತದ ಶಿಖರದ ಮೇಲೆ ನಿಂತು ಗಡಿ ರಕ್ಷಿಸುತ್ತಾರೆ. ಕಾರ್ಗಿಲ್ ಎಂಬ ಹಿಮಾಚ್ಛಾದಿತ ಪ್ರದೇಶದಿಂದ ಚಳಿಗಾಲದ ಸಂದರ್ಭದಲ್ಲಿ ಎರಡು ದೇಶಗಳು ತಮ್ಮ ಸೈನಿಕರನ್ನು ಹಿಂದೆ ಕರೆದು ಚಳಿಗಾಲ ಮುಗಿದ ನಂತರ ವಾಪಸ್ ಕಳಿಸುವುದು ಎರಡು ರಾಷ್ಟ್ರಗಳು ಮಾಡಿಕೊಂಡ ‘ಜೆಂಟಲ್‌ಮೆನ್’ ಒಪ್ಪಂದವಾಗಿತ್ತು. 1999ರಲ್ಲಿಯೂ ಭಾರತ ಈ ಅಲಿಖಿತ ಒಪ್ಪಂದಕ್ಕೆ ಬದ್ಧವಾಗಿತ್ತು. ಆದರೆ ಪಾಕ್ ಪಡೆ ಚಳಿಗಾಲ ಮುಗಿಯುವ ಮೊದಲೇ ಸಾವಿರಕ್ಕೂ ಅಧಿಕ ಸೈನಿಕರನ್ನು ಹಾಗೂ ಮುಜಾಹಿದ್ದೀನ್‌ಗಳನ್ನು ಕಳುಹಿಸಿ ಎಲ್‌ಓಸಿ ದಾಟಿ ತುರ್ತುಕ್, ಕಾರ್ಗಿಲ್, ಬಟಾಲಿಕ್, ದ್ರಾಸ್, ಕಕ್ಸರ್ ಮತ್ತು ಮುಷ್ಕೋ ಕಣಿವೆಗಳನ್ನು ಆಕ್ರಮಿಸಿಬಿಟ್ಟಿತು. ಇದರೊಂದಿಗೆ ಭಾರತೀಯ ಬಂಕರ್‌ಗಳಲ್ಲಿದ್ದ ಶಸ್ತ್ರಾಸ್ತ್ರಗಳನ್ನೂ ವಶಪಡಿಸಿಕೊಂಡಿತ್ತು.

1999ರ ಮೇ ತಿಂಗಳ ಆರಂಭದಲ್ಲಿ ಕಾರ್ಗಿಲ್ ಪ್ರದೇಶದಲ್ಲಿ ಅಸಹಜ ಓಡಾಟಗಳನ್ನು ಕಂಡ ಕುರಿಗಾಹಿಗಳು ಕೂಡಲೇ ಭಾರತೀಯ ಸೈನಿಕರಿಗೆ ವಿಚಾರ ತಲುಪಿಸಿದರು. ವಿಚಾರ ತಿಳಿದುಕೊಂಡ ಕೂಡಲೇ ಎಚ್ಚೆತ್ತ ಭಾರತೀಯ ಸೇನೆ ರೆಕ್ಕಿ ತಂಡವನ್ನು ಸಜ್ಜುಗೊಳಿಸಿತು. ಸೌರಭ್ ಖಾಲಿಯ ನೇತೃತ್ವದಲ್ಲಿ ಹಿಮಶಿಖರವೇರಿದ ಐವರು ಮತ್ತೆ ಹಿಂತಿರುಗಿ ಬರಲೇ ಇಲ್ಲ. ಇತ್ತ ಗಡಿ ನಿಯಂತ್ರಣ ರೇಖೆಯಲ್ಲಿ ಪಾಕಿಗಳು ಗುಂಡಿನ ಸುರಿಮಳೆ ಶುರು ಮಾಡಿದ್ದರು. ಯುದ್ಧ ಪ್ರಾರಂಭವಾಗಿದೆ ಎಂಬ ವಿಚಾರ ತಿಳಿದು ಕೂಡಲೇ ಭಾರತ ಎಚ್ಚೆತ್ತುಕೊಂಡಿತು. ರೆಕ್ಕಿಗೆಂದು ಹೋಗಿದ್ದ ಸೌರಭ್ ಖಾಲಿಯ ಅವರ ಶವವಾಗಿ ಹಿಂತಿರುಗಿದಾಗ ರಾಷ್ಟ್ರವೇ ಬೆಚ್ಚಿಬಿದ್ದಿತ್ತು. 22ರ ಯುವಕ ಸೌರಭ್‌ನನ್ನು ಅಮಾನುಷವಾಗಿ ಕೊಂದಿದ್ದ ಪಾಕ್ ಸೇನೆಗೆ ತಕ್ಕ ಪಾಠ ಕಲಿಸಲು ಸಜ್ಜಾಯಿತು. ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸೇನೆಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರು.

ಎಷ್ಟು ಸಂಖ್ಯೆಯಲ್ಲಿ ಪಾಕಿಸ್ತಾನದ ಸೈನಿಕರು ಗುಡ್ಡವನ್ನು ಆವರಿಸಿದ್ದಾರೆ ಎಂಬುದು ಭಾರತದ ಸೈನ್ಯಕ್ಕೆ ಅರಿವಿರಲಿಲ್ಲ. ಆ ಸಂದರ್ಭದಲ್ಲಿ ಭಾರತದ ಸಹಾಯಕ್ಕೆ ಬಂದದ್ದು ಇಸ್ರೇಲ್. ಅದು ತನ್ನ ಅತ್ಯಾಧುನಿಕ ಉಪಗ್ರಹ ಹಾಗೂ ಸೆಟಿಲೈಟ್ ಮೂಲಕ ಇಡೀ ಪ್ರದೇಶದ ಚಿತ್ರವನ್ನು ತೆಗೆದು ಅದರಲ್ಲಿ ಕೆಂಪು ಹಸಿರು ಝೋನ್‌ಗಳನ್ನು ಗುರುತಿಸಿ ಭಾರತೀಯ ಸೇನೆಗೆ ನೀಡಿತು. ಇದನ್ನು ವಿಶ್ಲೇಷಿಸಿದಾಗ ಸರಿಸುಮಾರು ಸಾವಿರಕ್ಕೂ ಹೆಚ್ಚು ಸೈನಿಕರು 80 ಕಿಲೋಮೀಟರ್ ಒಳಗೆ ಬಂದಿದ್ದಾರೆ ಎಂಬುವುದು ಸ್ಪಷ್ಟವಾಯಿತು.

**ಆಪರೇಷನ್ ವಿಜಯ್:** ಯುದ್ಧದ ಸಂಪೂರ್ಣ ವಿವರವನ್ನು ಪಡೆದ ಸೈನ್ಯ 2 ಲಕ್ಷ ಸೈನಿಕರನ್ನು ಯುದ್ಧ ಭೂಮಿಗೆ ಕರೆತಂದಿತು. ಪಾಕಿಗಳು ಆವರಿಸಿದ್ದ 132 ಪೋಸ್ಟ್‌ಗಳ ಮೇಲೂ ದಾಳಿ ಮಾಡಲು ಸಿದ್ಧವಾಯಿತು. ‘ಆಪರೇಷನ್ ವಿಜಯ್’ ಹೆಸರಿನಲ್ಲಿ ಹೋರಾಡಲು ಸಿದ್ಧವಾದ ಪ್ರತಿ ಭಾರತೀಯ ಸೇನೆಯ ಸೈನಿಕನಿಗೆ ಪಾಕಿಸ್ತಾನವನ್ನು ಹಿಂದಟ್ಟಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸುವುದೊಂದೇ ಧ್ಯೇಯವಾಗಿತ್ತು. ಸೈನಿಕರ ಬಲವಾದ ಹೋರಾಟದಿಂದ ದ್ರಾಸ್ ಕಣಿವೆ, ಕಾರ್ಗಿಲ್, ಟೈಗರ್ ಹಿಲ್ಸ್, ಕ್ಲೀಫ್ ಬ್ಲಾಕ್ ರಾಕ್, ಮುಷ್ಕೋ ಕಣಿವೆ, ಬಟಾಲಿಕ್ ಸೆಕ್ಟರ್, ತುರ್ತುಕ್ ಸೆಕ್ಟರ್ ಎಲ್ಲವೂ ಒಂದೊಂದಾಗಿ ಮರಳಿದವು. ಒಂದೊಂದು ಶಿಖರವೂ ಸಾವಿರಾರು ಅಡಿಗಳಷ್ಟು ಎತ್ತರವಿದ್ದ ಸ್ಥಳದಲ್ಲಿ ಹೋರಾಟ ಸುಲಭದ ಕೆಲಸವಾಗಿರಲಿಲ್ಲ. ಮೇಲಿದ್ದ ಶತ್ರುಗಳು ಒಂದು ಬಂಡೆಗಲ್ಲನ್ನು ತಳ್ಳಿದರೆ ಸಾಕು ನಮ್ಮ ಸೈನಿಕರು ಅತಿ ಸುಲಭವಾಗಿ ಬಲಿಯಾಗುವಂತಿತ್ತು. ಮೈನಸ್ 40 ಡಿಗ್ರಿಯನ್ನು ದಾಟುವ ಕೊರೆಯುವ ಚಳಿ, ಹಿಮಪಾತ ಇವೆಲ್ಲವನ್ನು ಮೆಟ್ಟಿ ನಿಂತು ಭಾರತೀಯ ಸೈನಿಕರು ನೀಡಿದ ಪ್ರತಿರೋಧ ಅವರ್ಣನೀಯ.

**ತ್ರಿವಿಧ ಸೇನೆಯ ಸಂಘಟನಾತ್ಮಕ ಹೋರಾಟ:** ಯಾವಾಗ ಭಾರತೀಯ ಭೂ, ವಾಯು, ನೌಕಾ ಸೇನೆಗಳು ಸಂಘಟನಾತ್ಮಕ ಹೋರಾಟವನ್ನು ನೀಡಲು ಪ್ರಾರಂಭಿಸಿತೋ ಪಾಕಿಸ್ತಾನದ ಎದೆಯಲ್ಲಿ ನಡುಕ ಪ್ರಾರಂಭವಾಯಿತು. ಬೋಫೋರ್ಸ್ ಫಿರಂಗಿಗಳು ಬೆಟ್ಟದ ಕೆಳಗೆ ನಿಂತು ಅಬ್ಬರಿಸಲು ಪ್ರಾರಂಭಿಸಿದವು. ಮತ್ತೊಂದು ಭಾಗದಲ್ಲಿ ಯೋಧರು ಬೆಟ್ಟವನ್ನೇರಿ ಶತ್ರುಗಳನ್ನು ಅಟ್ಟಾಡಿಸುತ್ತಿದ್ದರು. ಇನ್ನೊಂದು ಕಡೆಯಲ್ಲಿ ವಾಯುಪಡೆಯ ನಿರಂತರವಾದ ವೈಮಾನಿಕ ದಾಳಿ ನಡೆಯುತ್ತಿತ್ತು. ಇವೆಲ್ಲದಕ್ಕೂ ತತ್ತರಿಸಿ ಹೋಗಿತ್ತು ಪಾಕಿಸ್ತಾನ. ಇನ್ನು ನಮ್ಮ ನೌಕಾ ಸೇನೆ ಸುಮ್ಮನೆ ಕೂತಿರಲಿಲ್ಲ. ನೇರವಾಗಿ ದಾಳಿ ಮಾಡುವ ಬದಲಿಗೆ ಪಾಕಿಸ್ತಾನದ ಸಂಪೂರ್ಣ ಸಮುದ್ರ ಮಾರ್ಗಗಳನ್ನು ಮುಚ್ಚಿತು. ಸಮುದ್ರ ಮಾರ್ಗದಿಂದ ಯಾವುದೇ ವಸ್ತುಗಳು ಸರಬರಾಜಾಗದ ಹಾಗೆ ನಿರ್ಬಂಧ ಹೇರಲಾಯಿತು. ತೈಲದ ಸರಬರಾಜು ಸಂಪೂರ್ಣ ನಿಂತು ಹೋಯಿತು. ಭಾರತದ ಈ ದಿಗ್ಬಂಧನಕ್ಕೆ ತಲೆಬಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆತ್ತಲಾಗಿ ಶರಣಾಯಿತು ಪಾಕಿಸ್ತಾನ. ಭಾರತದ ಸಂಘಟನಾತ್ಮಕ ಹೋರಾಟದ ಸಲುವಾಗಿ ಕಾರ್ಗಿಲ್ ಯುದ್ಧವನ್ನು ಭಾರತ ಗೆದ್ದಿತು.

**ಅಜಾತಶತ್ರುವಿನ ಅಭೂತಪೂರ್ವ ಬೆಂಬಲ:** ರಾಷ್ಟ್ರ ನಡೆಸುವ ರಾಜ ಸಮರ್ಥನಾಗಿದ್ದರೆ ಅದು ಎಂತಹ ದಾಳಿಯಾದರೂ ಸಫಲವಾಗಲು ಸಾಧ್ಯ. ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಭಾರತದ ನೇತೃತ್ವ ವಹಿಸಿದವರು ಅಟಲ್ ಬಿಹಾರಿ ವಾಜಪೇಯಿ. ಅಂತರಾಷ್ಟ್ರೀಯ ಮಟ್ಟದಲ್ಲಿ ಯಾವ ಒತ್ತಡಗಳಿಗೂ ಮಣಿಯದೆ ಎದುರಾದ ಎಲ್ಲಾ ಸಂಕಷ್ಟವನ್ನು ಎದುರಿಸಿ ಸಮರ್ಥವಾಗಿ ನಿಂತರು ವಾಜಪೇಯಿ. ದೇಶಕ್ಕಾಗಿ ಒಂದು ಹೊತ್ತಿನ ಊಟವನ್ನು ಬಿಡುವಂತೆ ಜನರಲ್ಲಿ ಮನವಿ ಮಾಡಿದರು. ಇವರು ತೆಗೆದುಕೊಂಡ ಒಂದೊಂದು ನಿರ್ಧಾರವೂ ಭಾರತದ ಶಕ್ತಿಯನ್ನು ವಿಶ್ವ ಮಟ್ಟದಲ್ಲಿ ಪ್ರದರ್ಶಿಸಿತು. ಮಾನವೀಯ ಮೌಲ್ಯಗಳು ಭಾರತಕ್ಕೆ ಮಾತ್ರ ಸೀಮಿತವಲ್ಲ ಎಂದು ಚಾಟಿ ಏಟಿನಂತೆ ಅಮೆರಿಕಕ್ಕೆ ಉತ್ತರಿಸಿದರು. ಚೀನಾ ಮೌನಕ್ಕೆ ಶರಣಾಯಿತು.

**ಯೇ ದಿಲ್ ಮಾಂಗೆ ಮೋರ್:** ಕಾರ್ಗಿಲ್‌ನಲ್ಲಿ ಹೋರಾಡಿದ ನವ ಉತ್ಸಾಹಿ ತರುಣರ ತ್ಯಾಗ ಬಲಿದಾನ ನಿಜಕ್ಕೂ ಮೆಚ್ಚುವಂಥದ್ದು. ಹೋರಾಡಿ ಮಡಿದ ವೀರಕಲಿಗಳ ಶೌರ್ಯ ನಿಜಕ್ಕೂ ಆದರ್ಶ. ಯುದ್ಧ ರಂಗದಲ್ಲಿ ಪಾಯಿಂಟ್ 5140 ಶಿಖರವನ್ನು ಗೆದ್ದು ಬಂದ ವಿಕ್ರಂ ಬಾತ್ರ ಹೇಳಿದ್ದು “ಯೇ ದಿಲ್ ಮಾಂಗೇ ಮೋರ್”, ಟೈಗರ್ ಹಿಲ್ಸ್ ಅನ್ನು ಗೆದ್ದ ನಿಂಬಾಲ್‌ಕರ್ ಹೇಳಿದ್ದು “ಸರ್ ಐ ಯಂ ರೈಡಿಂಗ್ ಆನ್ ದ ಟೈಗರ್” ಯುದ್ಧಕ್ಕೆ ಹೊರಟ ಮನೋಜ್ ಕುಮಾರ್ ಪಾಂಡೆ ಹೇಳಿದ್ದು “If death strikes before I prove my blood I swear I will kill the death”. ರಾಷ್ಟ್ರ ರಕ್ಷಣೆಗೆ ಪಣತೊಟ್ಟು ನಿಂತ ಈ ತರುಣರ ವೀರವಾಣಿ ಸಾರ್ವಕಾಲಿಕವಾಗಿ ರಾಷ್ಟ್ರಕ್ಕಾಗಿ ಶ್ರಮಿಸುವ ಉತ್ಸಾಹವನ್ನು ನಮ್ಮಲ್ಲಿ ಉಂಟು ಮಾಡುತ್ತದೆ.

ಕಾರ್ಗಿಲ್ ಯುದ್ಧದಲ್ಲಿ ನಾವು 527 ಮಂದಿ ಅನರ್ಘ್ಯ ರತ್ನಗಳನ್ನು ಕಳೆದುಕೊಂಡೆವು. ಯುದ್ಧದಲ್ಲಿ ಅಪ್ರತಿಮ ಸಾಹಸ ಮೆರೆದ ರೈಫಲ್ ಮ್ಯಾನ್ ಸಂಜಯ್ ಕುಮಾರ್, ಗ್ರೆನೇಡಿಯರ್ ಯೋಗೇಂದ್ರಸಿಂಗ್ ಯಾದವ್, ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ, ಕ್ಯಾಪ್ಟನ್ ವಿಕ್ರಂ ಬಾತ್ರ ಅವರಿಗೆ ಸೇನೆಯ ಪರಮೋಚ್ಚ ಪುರಸ್ಕಾರ ‘ಪರಮವೀರ ಚಕ್ರ’ ನೀಡಲಾಯಿತು. ಇಂತಹ ಮಹಾನ್ ವೀರರ ತ್ಯಾಗ ಮತ್ತು ಬಲಿದಾನ ನಮಗೆ ಪ್ರೇರಣೆ.

ಸಂಸ್ಮರಣೆ

# ನಿರ್ಮಲ್ ಜಿತ್ ಸಿಂಗ್ ಸೆಖೋನ್

## (1943 ಜುಲೈ 17–1971 ಡಿಸೆಂಬರ್ 14)



1971ರ ಭಾರತ–ಪಾಕಿಸ್ತಾನ ಯುದ್ಧದ ಸಮಯದಲ್ಲಿ ಪಾಕ್ ವಾಯುದಾಳಿಯ ವಿರುದ್ಧ ಏಕಾಂಗಿಯಾಗಿ ಹೋರಾಡಿ ಭಾರತೀಯ ವಾಯುನೆಲೆಯ ರಕ್ಷಿಸಿದ ಸಾಹಸಿಗ ನಿರ್ಮಲ್ ಜಿತ್ ಸಿಂಗ್ ಸೆಖೋನ್. 'ಫ್ಲೈಯಿಂಗ್ ಆಫೀಸರ್' ಎಂದು ತಮ್ಮ ರ್‍ಯಾಂಕ್‌ನಿಂದಲೇ ಕರೆಸಿಕೊಂಡಿದ್ದ ನಿರ್ಮಲ್ ಜಿತ್ ಸಿಂಗ್ ರಾಷ್ಟ್ರಸೇವೆಗೆ ಮರಣೋತ್ತರವಾಗಿ ಭಾರತದ ಅತ್ಯುನ್ನತ ಸೇನಾ ಪದಕ ಪರಮವೀರ ಚಕ್ರವನ್ನು ಪಡೆದವರು. ಶತ್ರುವನ್ನು ಮಟ್ಟ ಹಾಕಿ, ಭಾರತೀಯ ವಾಯು ನೆಲೆಯನ್ನು ರಕ್ಷಿಸಿದ ಅವರ ಸಾಹಸಗಾಥೆ ಪ್ರತಿಯೊಬ್ಬ ಭಾರತೀಯನಿಗೂ ಪ್ರೇರಣಾದಾಯಕ.

ನಿರ್ಮಲ್ ಜಿತ್ ಸಿಂಗ್ ಸೆಖೋನ್ ಅವರು 1943 ಜುಲೈ 17ರಂದು ಪಂಜಾಬ್‌ನ ಲುಧಿಯಾನಾ ಜಿಲ್ಲೆಯಲ್ಲಿ ಜನಿಸಿದರು. ನಿರ್ಮಲ್ ಜಿತ್ ತಂದೆ ಫ್ಲೈಟ್ ಲೆಫ್ಟಿನೆಂಟ್ ತರ್ಲೋಚನ್ ಸಿಂಗ್ ಸೆಖೋನ್. ತಂದೆಯಂತೆ ತಾನೂ ಸಹ ವಾಯುಪಡೆಗೆ ಸೇರಿ ದೇಶಸೇವೆ ಮಾಡಬೇಕೆಂಬ ಕನಸು ಕಂಡಿದ್ದರು. ಹಾಗಾಗಿ ಶ್ರಮವಹಿಸಿ 1967 ಜೂನ್ 4ರಂದು ಭಾರತೀಯ ವಾಯುಪಡೆಯ ನಂ. 18 ಸ್ಕ್ವಾಡ್ರನ್ ಘಟಕದ ಫ್ಲೈಯಿಂಗ್ ಆಫೀಸರ್ ಆಗಿ ನೇಮಕಗೊಂಡರು.

1971ರ ಭಾರತ–ಪಾಕಿಸ್ತಾನ ಯುದ್ಧದ ಸಮಯದಲ್ಲಿ, ಇವರಿಗೆ ತಮ್ಮ ದೇಶಭಕ್ತಿಯನ್ನು ಸಾಬೀತುಪಡಿಸುವ ಅವಕಾಶ ದೊರೆಯುತ್ತದೆ. ಯುದ್ಧದ ಸಂದರ್ಭದಲ್ಲಿ ನಿರ್ಮಲ್ ಜಿತ್ ಶ್ರೀನಗರ ಮೂಲದ ಫೋಲ್ಯಾಂಡ್ ಗ್ನಾಟ್ ಯುದ್ಧ ವಿಮಾನವನ್ನು ಹಾರಿಸುತ್ತಿದ್ದರು. 1971 ಡಿಸೆಂಬರ್ 14ರಂದು, ಪಾಕಿಸ್ತಾನಿ ವಾಯುನೆಲೆ ಪೇಶಾವರ್‌ನಿಂದ 26 ಚದರ ಮೀಟರ್‌ನ ಆರು ಪಾಕಿಸ್ತಾನದ ವಾಯುಪಡೆಯ F-86 ಜೆಟ್‌ಗಳಿಂದ ಶ್ರೀನಗರ ವಾಯುನೆಲೆ ಮೇಲೆ ದಾಳಿ ನಡೆಸಿತು. ಆ ಸಮಯದಲ್ಲಿ ಫ್ಲೈಯಿಂಗ್ ಆಫೀಸರ್ ಸೆಖೋನ್ ಕರ್ತವ್ಯದಲ್ಲಿದ್ದರು. ಆದರೆ, ಆಗಷ್ಟೇ ಟೇಕಾಫ್ ಆಗಿದ್ದ ಮತ್ತೊಂದು ವಿಮಾನ ಎಬ್ಬಿಸಿದ ಧೂಳಿನ ಮೋಡಗಳಿಂದಾಗಿ ನಿರ್ಮಲ್ ಜಿತರಿಗೆ ವಿಮಾನ ಹಾರಾಟ ಮಾಡಲು ಕಷ್ಟವಾಗುತ್ತದೆ. ಯಾವಾಗ ವಿಮಾನ ಟೇಕ್–ಆಫ್ ಆಗುತ್ತದೋ ಆ ಹೊತ್ತಿಗೆ, ಆರು ಶತ್ರು ವಿಮಾನಗಳಿಂದ ದಾಳಿ ಶುರುವಾಗಿತ್ತು. ನಂತರದ ವೈಮಾನಿಕ ಯುದ್ಧದಲ್ಲಿ, ಸೆಖೋನ್ ಒಂದು ಸಾಬರ್ ವಿಮಾನವನ್ನು ಹೊಡೆದುರುಳಿಸಿದರೆ, ಇನ್ನೊಂದನ್ನು ಸುಟ್ಟುಹಾಕಿದರು. ಇನ್ನುಳಿದ ವಿಮಾನಗಳನ್ನು ಹಿಮ್ಮೆಟ್ಟಿಸಿ ನಿರ್ಮಲ್ ಜಿತ್ ಪಾಕಿಸ್ತಾನಿ ವಾಯುದಾಳಿಗೆ ಸರಿಯಾಗಿ ತಿರುಗುತ್ತರ ಕೊಡುತ್ತಾರೆ. ಆದರೆ ತಮ್ಮ ವಿಮಾನದ ತಾಂತ್ರಿಕ ದೋಷಗಳು ಕಂಡು ಬಂದ ಕಾರಣ ನಿರ್ಮಲ್ ಜಿತ್ ಅವರನ್ನು ವಾಯುನೆಲೆಗೆ ಹಿಂತಿರುಗಲು ಸಲಹೆ ನೀಡಲಾಯಿತು. ವಿಮಾನದ ನಿಯಂತ್ರಣ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡದ ಕಾರಣ ವಿಮಾನವನ್ನು ಇಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಶ್ರೀನಗರದಿಂದ ಬೇಸ್‌ಗೆ ಬರುವ ರಸ್ತೆಯ ಬಳಿ, ಕೆಲವು ಮೈಲುಗಳಷ್ಟು ದೂರದಲ್ಲಿರುವ ಕಮರಿಯಲ್ಲಿ ಗ್ನಾಟ್ ವಿಮಾನದ ಅವಶೇಷಗಳು ಕಂಡುಬಂದವು. ಆದರೆ ಸೈನ್ಯ ಮತ್ತು ವಾಯುಪಡೆಯ ಹುಡುಕಾಟದ ನಂತರವೂ ನಿರ್ಮಲ್ ಜಿತ್ ಅವರ ದೇಹ ಸಿಗಲಿಲ್ಲ.

ಪಾಕ್ ವೈಮಾನಿಕ ದಾಳಿಯ ವಿರುದ್ಧ ಏಕಾಂಗಿಯಾಗಿ ಶ್ರೀನಗರ ವಾಯುನೆಲೆಯ ರಕ್ಷಣೆಯನ್ನು ಮಾಡಿದ ಇವರ ಸಾಧನೆಯನ್ನು ಗುರುತಿಸಿ ಅವರಿಗೆ ಮರಣೋತ್ತರವಾಗಿ ಭಾರತದ ಅತ್ಯುನ್ನತ ಮಿಲಿಟರಿ ಅಲಂಕಾರವಾದ ಪರಮವೀರ ಚಕ್ರವನ್ನು ನೀಡಲಾಯಿತು. ಪರಮವೀರ ಚಕ್ರ ಗೌರವಕ್ಕೆ ಪಾತ್ರರಾದ ಭಾರತೀಯ ವಾಯುಪಡೆಯ ಏಕೈಕ ಸದಸ್ಯರು ಅಂದರೆ ನಿರ್ಮಲ್ ಜಿತ್ ಸಿಂಗ್ ಸೆಖೋನ್!

ನಿರ್ಮಲ್ ಜಿತ್ ಸಿಂಗ್ ಸೆಖೋನ್ ಅವರ ಗೌರವಾರ್ಥವಾಗಿ ಲುಧಿಯಾನಾದ ಜಿಲ್ಲಾ ನ್ಯಾಯಾಲಯದಲ್ಲಿ ಧ್ವಜಸ್ತಂಭದ ಪಕ್ಕದಲ್ಲಿ ಪಂಜಾಬ್‌ನ ಅನೇಕ ನಗರಗಳಲ್ಲಿ ಅವರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಪಾಲಮ್‌ನ ಭಾರತೀಯ ವಾಯುಪಡೆಯ ವಸ್ತುಸಂಗ್ರಹಾಲಯದಲ್ಲಿ ಅವನ ಪ್ರತಿಮೆಯನ್ನು ಫೋಲ್ಯಾಂಡ್ ಗ್ನಾಟ್ ಯುದ್ಧವಿಮಾನದೊಂದಿಗೆ ಇರಿಸಲಾಗಿದೆ.

ಎಲ್ಲೋ ಕೇಳಿದ ಕಥೆ

## ತಾಳ್ಮೆ ಮುಖ್ಯ

ಒಮ್ಮೆ ಒಬ್ಬ ವ್ಯಕ್ತಿ ಅಂಚೆ ಕಛೇರಿಗೆ ಬಂದು ಅಲ್ಲಿದ್ದ ಯುವಕನ ಹತ್ತಿರ 'ಯಾವುದೋ ಕಂಪನಿಯ ಜನರಲ್ ಮ್ಯಾನೇಜರನೊಡನೆ ಮಾತನಾಡಬೇಕಾಗಿದೆ, ಫೋನ್ ಮಾಡುತ್ತೇನೆ' ಎಂದರಂತೆ. 'ಇನ್ನೂ ಗಂಟೆ ಒಂಬತ್ತು, ಹತ್ತೂವರೆ ಹೊತ್ತಿಗೆ ಅವರು ತಮ್ಮ ಆಫೀಸಿಗೆ ಹೋಗಬಹುದು. ಆಗ ನೀವು ಫೋನು ಮಾಡಿರಿ' ಎಂದ ಯುವಕ. ಆ ವ್ಯಕ್ತಿ ಗಾಂಭೀರ್ಯದಿಂದ ಅವನ ಮಾತನ್ನು ಕೇಳಿಸಿಕೊಂಡರೂ ಕೇಳಿಸದವರಂತೆ ಸ್ವಲ್ಪ ಹೊತ್ತು ಸುಮ್ಮನಿದ್ದು, ಬಳಿಕ ರಿಸೀವರ್ ತೆಗೆದುಕೊಂಡು ಡಯಲ್‌ಮಾಡಿ 'ಯಾರು ಮಾತನಾಡುತ್ತಿರುವುದು?' ಎಂದು ವಿಚಾರಿಸಿದರು. 'ಚಪರಾಸಿ' ಎಂದು ಉತ್ತರ ದೊರೆಯಿತು. ಆ ವ್ಯಕ್ತಿ ಬಿರುಸಾಗಿ ಫೋನನ್ನು ಕೆಳಗೆ ಕುಕ್ಕಿದರು. ಮತ್ತರ್ಧ ಗಂಟೆಯ ನಂತರ ತಿರುಗಿ ಫೋನ್ ಮಾಡಿದಾಗ ಅದೇ ಉತ್ತರ. ವ್ಯಕ್ತಿಯ ಸಹನೆ ಕಡಿಮೆಯಾಗ ತೊಡಗಿತು. ಸುಮಾರು ಹತ್ತೂವರೆಗೆ ತಿರುಗಿ ಫೋನ್ ಮಾಡಿ 'ಯಾರು ಚಪರಾಸಿನಾ ಮಾತಾಡೋದು?' ಎಂದು ಕೇಳಿದರು. ಆದರೆ ಆಗ ರಿಸೀವರ್ ತೆಗೆದುಕೊಂಡವರು ಜನರಲ್ ಮ್ಯಾನೇಜರ್ ಆಗಿದ್ದರು. ಇವರ ಮಾತನ್ನು ಕೇಳಿದಾಕ್ಷಣ ಅವರು ಏನೂ ಉತ್ತರ ಕೊಡದೇ ರಿಸೀವರ್ ಕೆಳಗೆ ಇಟ್ಟರು. ಆ ವ್ಯಕ್ತಿ ಆಫೀಸಿನಲ್ಲಿದ್ದ ಯುವಕನನ್ನು ಮಾತನಾಡಿಸದೇ ಪೇಚುಮೋರೆ ಹಾಕಿಕೊಂಡು ಅಲ್ಲಿಂದ ಹೊರಬಿದ್ದರಂತೆ.


ಪುಸ್ತಕ ಪರಿಚಯ

## ಸಂವಿಧಾನದ ಕೊಲೆಗೆ ನಡೆದ ಸಂಚು ಎಮರ್ಜೆನ್ಸಿ

**ಸಂಪಾದಕ:** ರೋಹಿತ್ ಚಕ್ರತೀರ್ಥ

**ಪ್ರಕಾಶನ:** ಅಯೋಧ್ಯಾ ಪ್ರಕಾಶನ

**ಬೆಲೆ:** 299ರೂ.




1975ರಲ್ಲಿ ಅಂದಿನ ಪ್ರಧಾನಿ, ಕಾಂಗ್ರೆಸ್ ಪಕ್ಷದ ನಾಯಕಿ ಇಂದಿರಾ ಗಾಂಧಿ ಅವರು ಘೋಷಿಸಿದ ತುರ್ತು ಪರಿಸ್ಥಿತಿ ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ಅಳಿಸಲಾರದ ಕಪ್ಪುಚುಕ್ಕೆ. ಇದು ಏಕಾಯಿತು, ಹೇಗಾಯಿತು ಮತ್ತು ಇದರ ಪರಿಣಾಮಗಳೇನು, ಸಂವಿಧಾನದ ಸ್ವರೂಪಕ್ಕೆ ಆದ ಘಾಸಿಯ ಪ್ರಮಾಣ ಎಂಥದ್ದು, ಷಾ ಆಯೋಗದ ವರದಿಯಲ್ಲಿ ದಾಖಲಿಸಿದ ಸತ್ಯಗಳೇನು, ಆ ವರದಿಯನ್ನು 35 ವರ್ಷ ಮುಚ್ಚಿಡುವುದಕ್ಕೆ ಏನು ಕಾರಣ ಎಂಬಿತ್ಯಾದಿ ಮಾಹಿತಿಗಳನ್ನೊಳಗೊಂಡ ಪುಸ್ತಕ ಇದು. ಕನ್ನಡದಲ್ಲಿ ಇದುವರೆಗೂ ಪ್ರಕಟವಾಗದ ಮಾಹಿತಿಗಳನ್ನು ಸಂಗ್ರಹ ರೂಪದಲ್ಲಿ ಕೊಡುವ ಕೃತಿ 'ಎಮರ್ಜೆನ್ಸಿ– ಸಂವಿಧಾನದ ಕೊಲೆಗೆ ನಡೆದ ಸಂಚು'. ಎಮರ್ಜೆನ್ಸಿ ಘೋಷಣೆಗೆ ಐವತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಅಯೋಧ್ಯಾ ಪಬ್ಲಿಕೇಶನ್ ಈ ಸಮಗ್ರ ಇತಿಹಾಸವನ್ನು ಎಳೆ ಎಳೆಯಾಗಿ ಬಿಡಿಸಿಡುವ ಪ್ರಯತ್ನವನ್ನು ಮಾಡಿದೆ.

ಪುಸ್ತಕಕ್ಕಾಗಿ: 7795827307, 6360581957

# ಸೇವೆಗಾಗಿ ಸದಾ ಸಿದ್ಧರಿರುವ ಶ್ರದ್ಧೆಯ ಪುಷ್ಪಗಳು

14 ಆಗಸ್ಟ್, 2020ರ ಬೆಳಿಗ್ಗೆ 10 ಗಂಟೆಗೆ ಜೈಪುರದ ಗಣೇಶ್ ಪುರಿಯ ಮಣ್ಣಿನ ಸೇವಾಬಸ್ತಿಗಳಲ್ಲಿ ಮಳೆಯು ಎಂತಹ ವಿನಾಶದ ಕಥೆಯನ್ನು ಬರೆಯಿತೆಂದರೆ, ಸ್ವಲ್ಪ–ಸ್ವಲ್ಪವೇ ಹಣ ಕೂಡಿಟ್ಟು ಕಟ್ಟಿದ್ದ ಮನೆಗಳು ಕೆಲವೇ ನಿಮಿಷಗಳಲ್ಲಿ ಟನ್‌ಗಟ್ಟಲೆ ಮಣ್ಣಿನ ಅಡಿಯಲ್ಲಿ ಸೇರಿ ಹೋದವು. ಪರಿಸ್ಥಿತಿ ಹೇಗಿತ್ತು ಎಂದರೆ, ಬಟ್ಟೆಬರೆ, ಅಡಿಗೆ ಮನೆಯ ಪಾತ್ರೆ, ಅಷ್ಟೇ ಅಲ್ಲದೇ ಬಾಗಿಲ ಬಳಿ ನಿಂತಿದ್ದ ಜೀವನಕ್ಕೆ ಆಧಾರವಾಗಿದ್ದ ಆಟೋ ರಿಕ್ಷಾಗಳ ತನಕ ಎಲ್ಲವೂ ಮಣ್ಣಿನ ಅಡಿಯಲ್ಲಿ ಹೂತುಹೋಗಿದ್ದವು, ಸುತ್ತಲೂ ಕೂಗಾಟ–ಚೀರಾಟ ಕೇಳಿಬರುತ್ತಿತ್ತು.

ತಪ್ಪಲುಗಳಲ್ಲಿ ನಿರ್ಮಿತವಾದ ಆ ಮೂರು ಸೇವಾಬಸ್ತಿಗಳ 150 ಕುಟುಂಬಗಳ ಜಗತ್ತು ಕೆಲವೇ ನಿಮಿಷಗಳಲ್ಲಿ ಧ್ವಂಸವಾಗಿತ್ತು. 6 ಅಡಿಯಷ್ಟು ಮಣ್ಣು ನುಗ್ಗಿ ಬಂದಿದ್ದರಿಂದ ಮನೆಗಳಲ್ಲಿ ಜನ ಅಸಹಾಯಕರಾಗಿ ಕುಳಿತಿದ್ದರು. ಆಕ್ರಂದಿಸುತ್ತಿದ್ದ ಜನರ ಬಳಿ ಸಹಾಯಕ್ಕಾಗಿ ಬಂದ ಸಂಘದ ಸ್ವಯಂಸೇವಕರು ಮೊದಲನೆಯದಾಗಿ ಜನರನ್ನು ಆ ಮನೆಗಳಿಂದ ಸುರಕ್ಷಿತವಾಗಿ ಹೊರತೆಗೆದು ನಂತರ ಆಹಾರದ ವ್ಯವಸ್ಥೆಯನ್ನು ಮಾಡಿದರು.

ಸ್ವಯಂಸೇವಕರಿಗೆ ಸಂಜೆ 3.30ಕ್ಕೆ ಈ ದುರ್ಘಟನೆಯ ಬಗ್ಗೆ ಸೂಚನೆ ಸಿಕ್ಕಿತು ಹಾಗೂ ರಾತ್ರಿ 8ಗಂಟೆಯ ಒಳಗೆ ಸಂಘದ ಪರಿವಾರಗಳಿಂದ 2800 ಭೋಜನದ ಪೊಟ್ಟಣಗಳು ಘಟನೆಯ ಸ್ಥಳಕ್ಕೆ ತಲುಪಿದ್ದವು.



ಸೇವಾಬಸ್ತಿಯಿಂದ 2ಕಿಲೋಮೀಟರ್ ದೂರದಲ್ಲಿರುವ ಸಮುದಾಯ ಭವನದಲ್ಲಿ ಸೇವಾಬಸ್ತಿಯ ನಿವಾಸಿಗಳಿಗೆ ಮಲಗುವ ವ್ಯವಸ್ಥೆ ಮಾಡಿದರು.

ಗುಲಾಬಿ ನಗರವಾದ ಜೈಪುರದಲ್ಲಿ ಇಂದ್ರದೇವನು ಎಷ್ಟು ಮಳೆ ಸುರಿಸಿದನೆಂದರೆ ಇಡೀ ನಗರವೇ



ಕೆರೆಯಂತಾಗಿತ್ತು. ಆದರೆ ಹೆಚ್ಚಿನ ಪರಿಣಾಮ ಆದದ್ದು ತಗ್ಗು ಪ್ರದೇಶಗಳಲ್ಲಿದ್ದ ಸೇವಾಬಸ್ತಿಗಳ ಮೇಲೆ. ತಪ್ಪಲುಗಳಲ್ಲಿ ನೆಲೆಗೊಂಡಿದ್ದ ಗಣೇಶಪುರಿಯ ಹಿಂಭಾಗದಲ್ಲಿ ನಿರ್ಮಿಸಲಾಗಿದ್ದ ಅಣೆಕಟ್ಟಿನ ಗೋಡೆಯು ನೀರಿನ ಒತ್ತಡವನ್ನು ತಡೆದುಕೊಳ್ಳಲಾಗದೆ ಹತ್ತಿರದಲ್ಲೆ ಇದ್ದ ಮರಳಿನ ವಿಶಾಲವಾದ ದಿಬ್ಬಗಳ ಮೇಲೆ ನೀರು ಹರಿದು ಬಂದು ಮಣ್ಣಿನ ಸೇವಾಬಸ್ತಿಯೊಳಗೆ ಪ್ರವೇಶಿಸಿತು. ಸರ್ಕಾರವು ಜೆ.ಸಿ.ಬಿ ಯಿಂದ ಮಣ್ಣನ್ನು ಹೊರ ತೆಗೆದು ತನ್ನ ಕರ್ತವ್ಯಕ್ಕೆ ಇತಿಶ್ರೀ ಹಾಡಿತು.

ಆದರೆ ಸಂಘದ ಸ್ವಯಂಸೇವಕರು 8 ದಿನಗಳ ಕಾಲ ವಾತಾವರಣ ಯಥಾಸ್ಥಿತಿಗೆ ಮರಳುವವರೆಗೂ ಅಲ್ಲಿಯೇ ಅಚಲವಾಗಿ ನಿಂತಿದ್ದರು. ಹತ್ತಿರದ ಲಾಲ್ ಡುಂಗ್ರಿ ಗಣೇಶ ದೇವಸ್ಥಾನದಲ್ಲಿ ತಾತ್ಕಾಲಿಕವಾದ ಅಡುಗೆ ಮನೆಯನ್ನು ನಿರ್ಮಿಸಿ ಸೇವಾಬಸ್ತಿಯ ಜನರಿಗೆ ಊಟದ ವ್ಯವಸ್ಥೆಯನ್ನು ಮಾಡಿದರು. ಸಂಘದ ಸ್ವಯಂಸೇವಕರು ಇಲ್ಲಿಗೇ ನಿಲ್ಲಲಿಲ್ಲ, ಕೆಲವರು ಗುದ್ದಲಿ ಮತ್ತು ಸಲಿಕೆಗಳನ್ನು ಹಿಡಿದು ಸೇವಾಬಸ್ತಿಯ ಜನರೊಂದಿಗೆ ಮನೆಯೊಳಗಿನ ಮಣ್ಣನ್ನು ತೆಗೆದರು ಹಾಗೂ ಅಲ್ಲಿದ್ದ ಪಾತ್ರೆ ಮತ್ತು ಬಟ್ಟೆಗಳನ್ನು ಒಣಗಿಸಲು ಸಹಾಯ ಮಾಡಿದರು. ಆದರೆ ಬಟ್ಟೆಗಳು ಎಷ್ಟು ಹಾಳಾಗಿದ್ದವು ಎಂದರೆ ನಗರದಿಂದ ಬಟ್ಟೆ ಹಾಗೂ ಅವಶ್ಯಕವಾದ ಪಾತ್ರೆಗಳನ್ನು ಸಂಗ್ರಹಿಸಿ ಗಣೇಶಪುರಿಯ ಸೇವಾಬಸ್ತಿಗಳಿಗೆ ವಿತರಿಸಬೇಕಾಯಿತು. ಅಷ್ಟೇ ಅಲ್ಲದೆ ಮುಂದಿನ ಹತ್ತು ದಿನ ಬರುವಂತೆ 150 ರೇಶನ್ ಕಿಟ್‌ಗಳನ್ನೂ ವಿತರಿಸಲಾಯಿತು.

8 ದಿನಗಳ ಕಾಲ ನಡೆದ ಈ ಕಸರತ್ತಿನಿಂದಾಗಿ ಸೇವಾಬಸ್ತಿಯ ಜನರ ಜೀವನ ನಿಧಾನವಾಗಿ ಸಹಜ ಸ್ಥಿತಿಯತ್ತ ಮರಳುತ್ತಿತ್ತು. ಹಾಗೆಯೆ ಇವರ ಪರಿಸ್ಥಿತಿಯನ್ನು ನೋಡಲು ಬಂದಿದ್ದ ಕೆಲವು ರಾಜಕೀಯ ವ್ಯಕ್ತಿಗಳು ಆಹಾರದ ಪೊಟ್ಟಣಗಳನ್ನು ವಿತರಿಸಲು ಬಂದಾಗ ಅದನ್ನು ಅವರು ನಿರಾಕರಿಸಿದ್ದಲ್ಲದೆ "ನಿಮ್ಮ ತೋರ್ಪಡಿಕೆ ಬೇಕಾಗಿಲ್ಲ, ನಮಗೆ ತುಂಬಾ ಅವಶ್ಯಕತೆ ಇದ್ದಾಗ ಈ ಖಾಕಿ ನಿಕ್ಕರ್ ತೊಟ್ಟ ಜನರು ನಮ್ಮ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡಿದರು" ಎಂದು ಅವರಿಗೆ ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದರು.

"ಎಲ್ಲೆಲ್ಲಿ ಪ್ರಕೃತಿ ವಿಕೋಪ ಸಂಭವಿಸಿದೆಯೋ, ಅಲ್ಲೆಲ್ಲ, ಮನುಷ್ಯನಲ್ಲಿ ಬೀಜರೂಪದಲ್ಲಿರುವ ಮಾನವತೆಯು ಚಿಗುರಿ ಶ್ರದ್ಧೆಯ ಪುಷ್ಪಗಳಾಗಿ ಅರಳುತ್ತದೆ". ಇದೇ ಕೆಲಸವನ್ನು ದೇಶವ್ಯಾಪಿಯಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಮಾಡುತ್ತಿದ್ದಾರೆ.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘಾ ಪ್ರಮೋದ್, ಹರಿಪ್ರಸಾದ್ ಈಶ್ವರಮಂಗಲ, ಸುಲಕ್ಷಣಾ ಶರ್ಮ, ಪಂಚಮಿ ಬಾಕಿಲಪದವು

## ಗ್ಲೋಬಲ್ ಇಂಡಿಯಾ ಎಐ ಶೃಂಗ ಸಭೆ ಸಂಪನ್ನ




ಭಾರತ ಸರ್ಕಾರವು 'ಗ್ಲೋಬಲ್ ಇಂಡಿಯಾ ಎಐ ಶೃಂಗಸಭೆ'ಯನ್ನು ಜುಲೈ 3–4, 2024 ರಂದು ನವದೆಹಲಿಯಲ್ಲಿ ಆಯೋಜಿಸಿತು. ಇಂಡಿಯಾ ಎಐ ಮಿಷನ್‌ನ ಏಳು ಪ್ರಮುಖ ಸ್ತಂಭಗಳಾದ ಕಂಪ್ಯೂಟ್ ಸಾಮರ್ಥ್ಯ, ಫೌಂಡೇಶನಲ್ ಮಾಡೆಲ್‌ಗಳು, ಡೇಟಾಸೆಟ್‌ಗಳು, ಅಪ್ಲಿಕೇಶನ್ ಡೆವಲಪ್‌ಮೆಂಟ್, ಫ್ಯೂಚರ್ ಸ್ಕಿಲ್ಸ್, ಸ್ಟಾರ್ಟ್‌ಅಪ್ ಫೈನಾನ್ಸಿಂಗ್ ಮತ್ತು ಸೇಫ್ ಎಐ ಮುಂತಾದ ಕ್ಷೇತ್ರಗಳಲ್ಲಿ ಎಐ ಅಭಿವೃದ್ಧಿಯನ್ನು ಮುಂದುವರಿಸುವುದರ ಕುರಿತು ಶೃಂಗಸಭೆಯು ಗಮನಹರಿಸಿತು. ಮಾರ್ಚ್ 2024ರಲ್ಲಿ USD 1.25 ಶತಕೋಟಿ ವೆಚ್ಚದಲ್ಲಿ ಇಂಡಿಯಾ ಎಐ ಮಿಷನ್ ಅನ್ನು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. GPAI 29 ಸದಸ್ಯ ರಾಷ್ಟ್ರಗಳೊಂದಿಗೆ ಬಹು–ಸ್ಟೇಕ್‌ಹೋಲ್ಡರ್ ಉಪಕ್ರಮವಾಗಿದ್ದು ಇದು ಎಐ ಸಂಬಂಧಿತ ಆದ್ಯತೆಗಳ ಮೇಲೆ ಅತ್ಯಾಧುನಿಕ ಸಂಶೋಧನೆ ಮತ್ತು ಅನ್ವಯಿಕ ಚಟುವಟಿಕೆಗಳನ್ನು ಬೆಂಬಲಿಸುವ ಮೂಲಕ ಎಐನಲ್ಲಿ ಪಠ್ಯ ಮತ್ತು ಅನುಷ್ಠಾನದ ನಡುವಿನ ಅಂತರವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ. GPAIನ ಸಾವಿರಕ್ಕೂ ಅಧಿಕ ಪ್ರತಿನಿಧಿಗಳು, ನೂರಕ್ಕೂ ಹೆಚ್ಚು ತಜ್ಞರು 12 ಅವಧಿಗಳಲ್ಲಿ ಶೃಂಗಸಭೆಯಲ್ಲಿ ಪಾಲ್ಗೊಂಡರು.

## ಸ್ಮಾರ್ಟ್ ಸಿಟಿ ಮಿಷನ್‌ನ 7160 ಯೋಜನೆಗಳು ಮುಕ್ತಾಯ

ಪ್ರಧಾನಿ ನರೇಂದ್ರ ಮೋದಿ ಅವರು 2015ರ ಜೂನ್ 25 ರಂದು ಪ್ರಾರಂಭಿಸಿದ ಸ್ಮಾರ್ಟ್ ಸಿಟೀಸ್ ಮಿಷನ್‌ಗೆ 9 ವರ್ಷ ಪೂರ್ಣಗೊಂಡಿದೆ. ಸ್ಮಾರ್ಟ್ ಸಿಟೀಸ್ ಮಿಷನ್ ಅಡಿಯಲ್ಲಿ 1,43,778 ಕೋಟಿ ರೂಪಾಯಿ ಮೌಲ್ಯದ 7,160 ಯೋಜನೆಗಳು ಇಲ್ಲಿಯವರೆಗೆ ಪೂರ್ಣಗೊಂಡಿವೆ. 20,392 ಕೋಟಿ ಮೌಲ್ಯದ ಇನ್ನೂ 854 ಯೋಜನೆಗಳು ಮುಕ್ತಾಯದ ಹಂತದಲ್ಲಿವೆ. ಕೇಂದ್ರವು 100 ನಗರಗಳಿಗೆ 46,387 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ ಮತ್ತು ಬಿಡುಗಡೆಯಾದ ಶೇ.93 ರಷ್ಟು ಹಣವನ್ನು ಬಳಸಿಕೊಳ್ಳಲಾಗಿದೆ ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

# ಸಾಲುದ್ದದ ಸುದ್ದಿಗಳು

## ವರ್ಚುವಲ್ ಆಗಲಿದೆ 'ಪರೀಕ್ಷಾ ಪೇ ಚರ್ಚಾ'




ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ಪರೀಕ್ಷಾ ಪೆ ಚರ್ಚಾ' ಉಪಕ್ರಮವು ವರ್ಚುವಲ್ ಪ್ಲಾಟ್‌ಫಾರ್ಮ್‌ಗಾಗಿ ಮರುಸೃಷ್ಟಿ ಪಡೆಯಲಿದ್ದು NCERT ಅವರ ಭಾಷಣಗಳನ್ನು ಚಿತ್ರಿಸಲು ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಿದೆ. ಪಾಲ್ಗೊಳ್ಳುವವರ ತೊಡಗುವಿಕೆ ಮತ್ತು ಪರಸ್ಪರ ಚಟುವಟಿಕೆಗೆ ಅನುಕೂಲವಾಗುವಂತಹ ವೈಶಿಷ್ಟ್ಯಗಳೊಂದಿಗೆ ಸಂವಾದಾತ್ಮಕ 2D/3D ಪರಿಸರದೊಂದಿಗೆ ವರ್ಚುವಲ್ ಪ್ಲಾಟ್‌ಫಾರ್ಮ್ ರೂಪುಗೊಳ್ಳಲಿದೆ. ದೇಶದಾದ್ಯಂತದ ಪ್ರೇಕ್ಷಕರು ತಮ್ಮ ಮನೆಯ ಸೌಕರ್ಯದಿಂದ ವರ್ಷಪೂರ್ತಿ ಈವೆಂಟ್ ಅನ್ನು ನೋಡಲು ಇದು ಅನುವು ಮಾಡಿಕೊಡುತ್ತದೆ. ವರ್ಚುವಲ್ ಪ್ಲಾಟ್‌ಫಾರ್ಮ್ ವಿದ್ಯಾರ್ಥಿಗಳಿಂದ ಕೈಗೊಳ್ಳಲಾದ ಕಲೆ, ಕರಕುಶಲ ಮತ್ತು ನಾವೀನ್ಯತೆ ಯೋಜನೆಗಳನ್ನು ಪ್ರದರ್ಶಿಸುತ್ತದೆ.

## ಯಕ್ಷರೂಪಕದ ಮೂಲಕ ಶಿರಸಿಯ ತುಳಸಿ ವಿಶ್ವದಾಖಲೆ

ಶಿರಸಿಯಲ್ಲಿ 10ನೇ ತರಗತಿ ಓದುತ್ತಿರುವ ತುಳಸಿ ಐದೂವರೆ ವರ್ಷದಿಂದ ವಿಶ್ವಶಾಂತಿ ರೂಪಕಗಳನ್ನು ಪ್ರಸ್ತುತಗೊಳಿಸುತ್ತಿದ್ದು ರಾಜ್ಯ, ಹೊರ ರಾಜ್ಯಗಳಲ್ಲಿ 850 ಕ್ಕೂ ಅಧಿಕ ಪ್ರದರ್ಶನ ನೀಡಿದ್ದಾಳೆ. ಇದೀಗ ಲಂಡನ್ ಮೂಲದ ಪ್ರತಿಷ್ಠಿತ ವರ್ಲ್ಡ್ ರೆಕಾರ್ಡ್ ಸಂಸ್ಥೆಯು



ತುಳಸಿ ಹೆಗಡೆ ಹೆಸರನ್ನು ತನ್ನ ವಿಶ್ವದಾಖಲೆಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದು ಮಕ್ಕಳ ವಿಭಾಗದ ತನ್ನ ದಾಖಲಾತಿಯಲ್ಲಿ ಸೇರಿಸಿಕೊಂಡಿದೆ. ಬೆರಳ ತುದಿಯಲ್ಲಿ ನರ್ತನ ಮಾಡುವ ವಿದೇಶವೊಂದರ ನೃತ್ಯ ಕಲಾ ಪ್ರಕಾರ ಹೊರತುಪಡಿಸಿದರೆ ಈವರೆಗೆ ಪ್ರಪಂಚದ ಯಾವುದೇ ಕಲಾ ಪ್ರಕಾರ ಈ ದಾಖಲಾತಿ ಪಟ್ಟಿಗೆ ಸೇರ್ಪಡೆ ಆಗಿರಲಿಲ್ಲ. ಈ ದಾಖಲೆಗೆ ತುಳಸಿ ಹೆಗಡೆ ಹೆಸರು ಸೇರ್ಪಡೆಯಿಂದ ಯಕ್ಷಗಾನದ ಹೆಸರೂ ಪ್ರಥಮ ಬಾರಿಗೆ ಸೇರಿದಂತಾಗಿದೆ.

## ದೇಶದ ಸಮಗ್ರ ಅಭಿವೃದ್ಧಿಗೆ ಸಂಪೂರ್ಣತಾ ಅಭಿಯಾನ

ಪ್ರತಿಯೊಬ್ಬರ ಸುಸ್ಥಿರ ಅಭಿವೃದ್ಧಿಗೆ ಗಮನ ಕೊಡುವ ನಿಟ್ಟಿನಲ್ಲಿ ದೇಶಾದ್ಯಂತ ಜಿಲ್ಲೆಗಳು ಮತ್ತು ವಲಯಗಳಲ್ಲಿ ಸುಸ್ಥಿರ ಅಭಿವೃದ್ಧಿಯ 6 ನಿರ್ಣಾಯಕ ಮಾನದಂಡಗಳನ್ನು ಸಾಧಿಸಲು ನೀತಿ ಆಯೋಗ ಮೂರು ತಿಂಗಳವರೆಗೆ ಸಂಪೂರ್ಣತಾ ಅಭಿಯಾನ ಕೈಗೊಂಡಿದೆ. ದೇಶದಲ್ಲಿ ಹಿಂದುಳಿದಿರುವ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ತರುವ ಉದ್ದೇಶದೊಂದಿಗೆ ನೀತಿ ಆಯೋಗ ಜುಲೈ 4ರಿಂದ ಸೆ.30ರವರೆಗೆ 3 ತಿಂಗಳು ಸಂಪೂರ್ಣತ ಅಭಿಯಾನವನ್ನು ಪ್ರಾರಂಭಿಸಿದೆ. ಇದರೊಂದಿಗೆ 112 ಜಿಲ್ಲೆಗಳು ಮತ್ತು 500 ವಲಯಗಳಲ್ಲಿ 6 ನಿರ್ಣಾಯಕ ಮಾನದಂಡಗಳ ಮೇಲೆ ಅಭಿಯಾನ ಗಮನ ಕೇಂದ್ರೀಕರಿಸಲಿದ್ದು, ಈ ಮೂಲಕ ನೀತಿ ಆಯೋಗ, ದೇಶದಲ್ಲಿ ಯಾರು ಹಿಂದುಳಿದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಮುಂದಾಗಿದೆ. ಪ್ರಸವಪೂರ್ಣ ಆರೈಕೆ ನೋಂದಣಿ, ಮಧುಮೇಹ ತಪಾಸಣೆ, ಅಧಿಕ ರಕ್ತದೊತ್ತಡ ಪರೀಕ್ಷೆ, ಪೂರಕ ಪೋಷಣೆ, ಮಣ್ಣಿನ ಆರೋಗ್ಯ ಕಾರ್ಡ್‌ಗಳು, ಸ್ವಸಹಾಯ ಗುಂಪುಗಳ ಮಾನದಂಡದಡಿಯಲ್ಲಿ ಈ ಅಭಿಯಾನ ನಡೆಯಲಿದೆ.

# ಬುಡಕಟ್ಟು ಜನಾಂಗದ ಪತ್ರಕರ್ತೆ ಜಯಂತಿಯ ಸಾಧನಾಗಾಥೆ

ಖ್ಯಾತ ಬ್ರೆಜಿಲಿಯನ್ ಕಾದಂಬರಿಕಾರ ಪೌಲೋ ಕೊಯೆಲೊ ಅವರ 'ನೀವು ಏನನ್ನಾದರೂ ಬಯಸಿದಾಗ, ಅದನ್ನು ಸಾಧಿಸಲು ನಿಮಗೆ ಸಹಾಯ ಮಾಡುವಲ್ಲಿ ಇಡೀ ವಿಶ್ವವು ಒಂದುಗೂಡುತ್ತದೆ'. ಎಂಬ ಮಾತಿಗೆ ಇಂದು ಮೂರ್ತರೂಪವಾಗಿರುವವರು ಒಡಿಶಾದ ಕೋಯ ಬುಡಕಟ್ಟಿನ ಜಯಂತಿ ಬುರುಡ ಅವರು. ಪ್ರತಿದಿನವೂ ಸವಾಲುಗಳನ್ನು ಎದುರಿಸುತ್ತಲೇ ಸಾಧನೆಯನ್ನು ಮಾಡಿದಂತಹ ದಿಟ್ಟ ಮಹಿಳೆ ಆಕೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿನ ಕೊಡುಗೆಗಾಗಿ ಫೋರ್ಬ್ಸ್ ಇಂಡಿಯಾದ ಡಬ್ಲ್ಯು–ಪವರ್ 2024 ಪಟ್ಟಿಯಲ್ಲಿ ಸ್ಥಾನ ಪಡೆದ ಮೊದಲ ಬುಡಕಟ್ಟು ಜನಾಂಗದ ಮಹಿಳೆ ಎಂಬ ಖ್ಯಾತಿ ಇವರದ್ದಾಗಿದೆ.

ಜಯಂತಿ ತನ್ನ ಹೆತ್ತವರ ಹನ್ನೊಂದು ಮಕ್ಕಳಲ್ಲಿ ಒಂಭತ್ತನೆಯವಳಾಕೆ. ಇವರು ಅತ್ಯಂತ ಕಷ್ಟದಲ್ಲಿ ಬಾಲ್ಯವನ್ನು ಕಳೆದರಾದರೂ, ಕನಸು ಕಾಣಲು ಕಷ್ಟವಾಗಲಿಲ್ಲ; ತಾನು ಪತ್ರಿಕರ್ತೆ ಆಗಲೇಬೇಕೆಂಬ ಕನಸನ್ನು ಬಾಲ್ಯದಲ್ಲಿಯೇ ಕಟ್ಟಿಕೊಂಡುಬಿಟ್ಟಿದ್ದರು. ತನ್ನ ಕನಸನ್ನು ನನಸು ಮಾಡುವ ಹಾದಿಗೆ ಹೆತ್ತವರೇ ಅಡ್ಡಗೋಲು ಹಾಕಿದ್ದರಿಂದ ಆಕೆ ಮನೆಯನ್ನು ತೊರೆದು, ಜಿಲ್ಲಾ ಕೇಂದ್ರದ ಬುಡಕಟ್ಟು ಯುವತಿಯರ ವಸತಿ ಕೇಂದ್ರದಲ್ಲಿ ಆಶ್ರಯ ಪಡೆದು, ಕೊರಾಪುಟ್‌ನ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ದಾಖಲಾದರು. ಹಾಸ್ಟೆಲ್‌ನ ದೀದಿಯರು ಅವರ ಶುಲ್ಕ ಭರಿಸಿದರು. ಒಡಿಶಾದ ಮಲಕನಗಿರಿ ಜಿಲ್ಲೆಯ ಪುಟ್ಟಪಳ್ಳಿ ಸೆರ್ಪಾಲಿಯ ಜಯಂತಿ, 'ನೆಟ್‌ವರ್ಕ್ ಆಫ್ ವಿಮೆನ್ ಇನ್ ಮೀಡಿಯಾ, ಇಂಡಿಯಾ'ದ ಪ್ರಪ್ರಥಮ ಫೆಲೋಶಿಪ್ ಪಡೆದು ತಮ್ಮ ಪದವಿಯನ್ನು ಗಳಿಸಿಕೊಂಡರು.

2015ರಲ್ಲಿ ದೂರದರ್ಶನ ಚಾನೆಲ್‌ಗೆ ಜಿಲ್ಲಾ ವರದಿಗಾರರಾಗಿ ಜಯಂತಿ ಸೇರಿಕೊಂಡರು. ಪತ್ರಕರ್ತಳಾಗಿ ವರದಿಯನ್ನು ಮಾತ್ರ ಮಾಡದೆ ಸಮಾಜದ ಸಮಸ್ಯೆಗಳನ್ನೂ ಗಮನಿಸುತ್ತಾ ಸಾಗಿದರು.



ಬುಡಕಟ್ಟು ಮಹಿಳೆಯರ ಏಳಿಗೆಗಾಗಿ, ಸಮಾಜದ ಕಲ್ಯಾಣಕ್ಕಾಗಿ 2018ರಲ್ಲಿ ಬಡಾ ದೀದಿ ಯೂನಿಯನ್ ಸ್ಥಾಪಿಸಿದರು. ಆದಾಗ್ಯೂ, ಬುಡಕಟ್ಟು ಮಹಿಳೆಯರು ತಮ್ಮ ಸಮಸ್ಯೆಗಳ ಕುರಿತು ಧ್ವನಿಯೆತ್ತಲೇ ಇಲ್ಲ. ಇದನ್ನು ಗಮನಿಸಿದ ಜಯಂತಿ ಅವರು 2022ರಲ್ಲಿ 'ಜಂಗಲ್‌ರಾಣಿ' ಎಂಬ ಸಾಮಾಜಿಕ ಜಾಲತಾಣದ ಸುದ್ದಿಮಾಧ್ಯಮ ಪ್ರಾರಂಭಿಸಿದರು. 'ಅಮ ಕಹಾನಿ, ಅಮ ದ್ವಾರಾ, ಅಮಪೇನ್' ಅಂದರೆ ನಮ್ಮ ಕತೆ, ನಮ್ಮಿಂದ, ನಮಗಾಗಿ' ಎಂಬ ಹೆಸರಿನ ಮಾಧ್ಯಮದ ಮೂಲಕ ಬುಡಕಟ್ಟು ಜನಾಂಗದ ಕಥೆಯನ್ನು ಹೇಳಲು ತೊಡಗಿದರು. ಪ್ರಸ್ತುತ ಮಲಕನಗಿರಿ ಜಿಲ್ಲೆಯ ಐವತ್ತು ಮಂದಿ ಬುಡಕಟ್ಟು ಮಹಿಳೆಯರು ಈ ಸುದ್ದಿಮಾಧ್ಯಮವನ್ನು ನಿರ್ವಹಿಸುತ್ತಲಿದ್ದಾರೆ. ಈ ಐವತ್ತು ಮಂದಿಗೆ ಪತ್ರಿಕೋದ್ಯಮದ ಆಯಾಮವನ್ನು ತಿಳಿಸಿದಂತಹ ಹೆಮ್ಮೆ ಜಯಂತಿ ಅವರದು.

ಜಂಗಲ್ ರಾಣಿ ಮಾಧ್ಯಮದ ಮೂಲಕ ಬುಡಕಟ್ಟು ಮಂದಿಯನ್ನು ಇಂದಿನ ಪ್ರಪಂಚದಲ್ಲಿ ಸದೃಢವಾಗಿ ಬದುಕನ್ನು ಕಟ್ಟಿಕೊಳ್ಳುವುದರ ಬಗೆಗೆ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತದೆ. ಈ ಕಾರಣ ಮಲಕನಗಿರಿ ಜಿಲ್ಲೆಯ ಬುಡಕಟ್ಟು ಮಹಿಳೆಯರು ತೀರಾ ಹಿಂದುಳಿದವರು ಎನ್ನುವ ಹಣೆಪಟ್ಟಿ ಮಾಯವಾಗಿ ಬುದ್ಧಿವಂತರು ಎಂದು ಗುರುತಿಸಲು ಸಾಧ್ಯವಾಗಿದೆ. ಈ ಯಶಸ್ವಿನ ಪಯಣವನ್ನು ಅಲ್ಲಿಗೆ ಸ್ಥಗಿತಗೊಳಿಸದೆ ಮುಂದೆ ಬುಡಕಟ್ಟು ಮಂದಿಯೇ ಹೆಚ್ಚಾಗಿ ವಾಸಿಸುತ್ತಿರುವ ಒಡಿಶಾದ ಇತರೆ ಜಿಲ್ಲೆಗಳಿಗೆ ವಿಸ್ತರಿಸುವ ಕನಸನ್ನು ಇವರು ಹೊಂದಿದ್ದಾರೆ.

ಜಯಂತಿಯವರ ನಿರಂತರ ಹೋರಾಟವನ್ನು, ಸಮಾಜಮುಖಿ ಕಾರ್ಯವನ್ನು ಗಮನಿಸಿ ಫೋರ್ಬ್ಸ್ ಇಂಡಿಯಾದ ಡಬ್ಲ್ಯು–ಪವರ್ 2024 ಪಟ್ಟಿಯಲ್ಲಿ ಸ್ಥಾನವನ್ನು ನೀಡಿರುವುದು ಜಯಂತಿಯವರ ಪರಿಶ್ರಮಕ್ಕೆ ಸಂದ ಪ್ರತಿಫಲವೂ ಹೌದು; ಮಾಧ್ಯಮಗಳಿಗೆ ಪ್ರೇರಣೆಯೂ ಹೌದು.

> “ಬುಡಕಟ್ಟು ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಬೆಳಕಿಗೆ ತರಲು ಸಾಧ್ಯವಾಗುತ್ತದೆ ಎಂದು ನಾನು ಪತ್ರಕರ್ತಳಾಗಲು ಬಯಸಿದ್ದೆ. ಆದರೆ ಪ್ರಮುಖ ಸುದ್ದಿ ಮಾಧ್ಯಮಗಳು ಬುಡಕಟ್ಟು ಸಮುದಾಯಗಳ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದಿಲ್ಲ ಅಥವಾ ಅವುಗಳನ್ನು ಸಮಗ್ರವಾಗಿ ತಿಳಿಸುವುದಿಲ್ಲ ಎಂದು ನಾನು ಅರಿತುಕೊಂಡೆ. ಹಾಗಾಗಿ ಸಾಮಾಜಿಕ ಜಾಲತಾಣದ ಮೂಲಕ ನನ್ನದೇ ಚಾನೆಲ್ ಆರಂಭಿಸಿದೆ. ಇಲ್ಲಿ ಕ್ಯಾಮರಾದಲ್ಲಿ ಕೆಲಸ ಮಾಡಿ ನನ್ನ ಜನರ ಕಥೆಗಳನ್ನು ಹೇಳುವುದು ನನಗೆ ಆತ್ಮಸ್ಥೈರ್ಯವನ್ನು ನೀಡುತ್ತದೆ.”
>
> – ಜಯಂತಿ ಬುರುಡ



पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JULY 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-07-2024



## ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪ್ರದಾನ

ಬೆಂಗಳೂರು: ರಾಜ್ಯದ ಸುದ್ದಿ ಸಂವಹನ ಸಂಸ್ಥೆ 'ವಿಶ್ವ ಸಂವಾದ ಕೇಂದ್ರ ಕರ್ನಾಟಕ', ಇದರ ವತಿಯಿಂದ ನೀಡಲಾಗುವ ವಾರ್ಷಿಕ ವಿಎಸ್‌ಕೆ ಮಾಧ್ಯಮ ಪ್ರಶಸ್ತಿಯ 2024ನೇ ಸಾಲಿನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಬಸವನಗುಡಿಯ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜೂನ್ 30, 2024ರಂದು ನಡೆಯಿತು. ಕಾರ್ಯಕ್ರಮದಲ್ಲಿ ಆರ್ಗನೈಸರ್ ಸಂಪಾದಕ ಪ್ರಫುಲ್ಲ ಕೇತ್ಕರ್, ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಘಚಾಲಕ ಡಾ.ಪಿ.ವಾಮನ್ ಶೆಣ್ಯೆ, ವಿಶ್ವ ಸಂವಾದ ಕೇಂದ್ರ ಕರ್ನಾಟಕದ ವಿಶ್ವಸ್ಥ ಶ್ರೀನಿವಾಸ್ ಭಟ್ ಉಪಸ್ಥಿತರಿದ್ದರು.



ವಿಶ್ವ ಸಂವಾದ ಕೇಂದ್ರ ಕರ್ನಾಟಕದ ವತಿಯಿಂದ ನೀಡಲಾದ ತಿ.ತಾ.ಶರ್ಮ ಪತ್ರಿಕೋದ್ಯಮ ಪ್ರಶಸ್ತಿಗೆ ವಿಜಯಕರ್ನಾಟಕ ಪತ್ರಿಕೆಯ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿಗೆ ಏಷಿಯಾನೆಟ್ ಸುವರ್ಣನ್ಯೂಸ್‌ನ ಸಂಪಾದಕ ಅಜಿತ್ ಹನಮಕ್ಕನವರ್, ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿಗೆ ಸ್ತ್ರೀಜಾಗೃತಿ ಪತ್ರಿಕೆಯ ಸಂಪಾದಕಿ ಶೋಭಾ ಎಚ್. ಜಿ., ಹೊ.ವೆ.ಶೇಷಾದ್ರಿ ಅಂಕಣಕಾರ ಪ್ರಶಸ್ತಿಗೆ ಖ್ಯಾತ ಅಂಕಣಕಾರ ಪ್ರೊ.ಪ್ರೇಮಶೇಖರ, ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿಗೆ ಡಾ.ಪೂರ್ವಿ ಜಯರಾಜ್ ಭಾಜನರಾದರು.

## ಬೆಂಗಳೂರಿನ ಕಬ್ಬನ್ ಪಾರ್ಕ್ ಸಂಸ್ಕೃತ ಚರ್ಚೆ–ಸಂವಹನಕ್ಕೆ ಪ್ರಧಾನಿ ಮೋದಿ ಶ್ಲಾಘನೆ




ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಪ್ರತಿ ಭಾನುವಾರ ನಡೆಯುವ 'ಸಂಸ್ಕೃತ ಚರ್ಚೆ–ಸಂವಹನ' ಕಾರ್ಯಕ್ರಮವನ್ನು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ. 'ಸಂಸ್ಕೃತ ವೀಕೆಂಡ್' ಹೆಸರಿನ ಕಾರ್ಯಕ್ರಮ ಹೊಸ ಟ್ರೆಂಡ್ ಆರಂಭಿಸಿದೆ. ಸಂಸ್ಕೃತ ಭಾಷೆ ಉಳಿಸಿ– ಬೆಳೆಸುವಲ್ಲಿ ಕಬ್ಬನ್ ಪಾರ್ಕ್ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಿದೆ ಎಂದು ಮೋದಿ ಪ್ರಶಂಸಿಸಿದ್ದಾರೆ. ಸಂಸ್ಕೃತ ಭಾಷಾ ಸಂವಹನ ಕಾರ್ಯಕ್ರಮವನ್ನು ಮೊದಲು 'ಸಮಷ್ಟಿ ಗುಬ್ಬಿ' ಅವರು ವೆಬ್‌ಸೈಟ್‌ನಲ್ಲಿ ಆರಂಭಿಸಿದರು. ಕಾರ್ಯಕ್ರಮಕ್ಕೆ ಬಹು ಬೇಗ ಜನಮ ಮನ್ನಣೆ ಸಿಕ್ಕಿತು. ಬಳಿಕ ಕಬ್ಬನ್ ಪಾರ್ಕ್‌ನಲ್ಲಿ ಪ್ರತಿ ಭಾನುವಾರ ಮಕ್ಕಳು, ವೃದ್ಧರು ಸೇರಿದಂತೆ ಸಂಸ್ಕೃತ ಭಾಷಾಭಿಮಾನವಿರುವ ಎಲ್ಲರೂ ಸೇರಿ ಸಂಸ್ಕೃತ ಭಾಷೆಯಲ್ಲೇ ಅನೇಕ ಚರ್ಚೆ, ಸಂವಹನ ನಡೆಸುವ ಮಟ್ಟಕ್ಕೆ ಕಾರ್ಯಕ್ರಮ ಬೆಳೆದಿದೆ. ಪುಟ್ಟ ಮಕ್ಕಳೂ ಹಿರಿಯರಿಂದ ಇಲ್ಲಿ ಸಂಸ್ಕೃತ ಭಾಷೆ ಕಲಿಯುವುದು ವಿಶೇಷ. ನಾವೆಲ್ಲರೂ ಇಂತಹ ಪ್ರಯತ್ನಕ್ಕೆ ಕೈಜೋಡಿಸೋಣ, ವೈಜ್ಞಾನಿಕ –ಪ್ರಾಚೀನ ಭಾಷೆಗಳಿಂದ ಸಾಕಷ್ಟು ಕಲಿಯಬಹುದು ಎಂದು ಮೋದಿ ಉತ್ತೇಜಿಸಿದ್ದಾರೆ. ಸಂಸ್ಕೃತ ಭಾಷೆ ನಿತ್ಯ ಮಾತನಾಡುವ ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮದ ಬಗ್ಗೆಯೂ ಪ್ರಸ್ತಾಪಿಸಿದ್ದರು.

## ದೇಶದಲ್ಲಿ ಬಡವರ ಸಂಖ್ಯೆ ಶೇ. 8.5ಕ್ಕೆ ಇಳಿಕೆ

ದೇಶದಲ್ಲಿ ಬಡವರ ಪ್ರಮಾಣ ಶೇ.8.5ಕ್ಕೆ ಇಳಿಕೆಯಾಗಿದೆ ಎಂದು ಪ್ರಸಿದ್ಧ ಖಾಸಗಿ ಸಂಶೋಧನಾ ಸಂಸ್ಥೆ ಎನ್‌ಸಿಎಇಆರ್ (ರಾಷ್ಟ್ರೀಯ ಅನ್ವಯಿಕ ಆರ್ಥಿಕ ಸಂಶೋಧನಾ ಮಂಡಳಿ)ನ ಮಾನವ ಅಭಿವೃದ್ಧಿ ಸಮೀಕ್ಷೆಯ ವರದಿ ಹೇಳಿದೆ. 2011–12 ಸಾಲಿನಲ್ಲಿ ದೇಶದಲ್ಲಿ ಬಡವರ ಸಂಖ್ಯೆ ಶೇ.21ರಷ್ಟಿತ್ತು. ಅದು ಈಗ ಶೇ.8.5ಕ್ಕೆ ಇಳಿಕೆಯಾಗಿದೆ. ಆಹಾರ ಸಬ್ಸಿಡಿ, ಸರ್ಕಾರಿ ನೆರವುಗಳಿಂದಾಗಿ ದೇಶದಲ್ಲಿ ಬಡತನ ಪ್ರಮಾಣ ಕಡಿಮೆಯಾಗಿದೆ. ಸರ್ಕಾರಗಳು ಸಾಮಾಜಿಕ ಭದ್ರತೆಗೆ ಒತ್ತು ನೀಡದೆ ಹೋದರೆ ಮತ್ತೆ ಬಡತನ ಹೆಚ್ಚುವ ಸಂಭವ ಇದೆ. ಗ್ರಾಮೀಣ ಪ್ರದೇಶದಲ್ಲಿ 2011ರಲ್ಲಿ ಇದ್ದ ಬಡವರ ಸಂಖ್ಯೆ ಶೇ.24.8ರಿಂದ ಈಗ ಶೇ.8.6ಕ್ಕೆ ಇಳಿಕೆಯಾಗಿದೆ. ನಗರ ಪ್ರದೇಶಗಳಲ್ಲಿ ಇದ್ದ ಬಡವರ ಸಂಖ್ಯೆ ಶೇ.13.4ರಿಂದ ಶೇ.8.4ಕ್ಕೆ ಇಳಿಕೆಯಾಗಿದೆ. ಒಟ್ಟಾರೆ 2011ರಲ್ಲಿ ಶೇ.21ರಷ್ಟಿದ್ದ ಬಡವರ ಸಂಖ್ಯೆ ಈಗ ಶೇ.8.5ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಲಾಗಿದೆ.

## ಅಯೋಧ್ಯೆಯಲ್ಲಿ ನಿರ್ಮಾಣವಾಗಲಿದೆ ದೇವಾಲಯಗಳ ಮ್ಯೂಸಿಯಂ



ಶ್ರೀರಾಮ ಜನ್ಮಭೂಮಿ ಅಯೋಧ್ಯೆಯ ರಾಮಮಂದಿರ ಉದ್ಘಾಟನೆಯ ಬೆನ್ನಲ್ಲೇ 650 ಕೋಟಿ ರೂ. ವೆಚ್ಚದಲ್ಲಿ ದೇಗುಲಗಳ ವಸ್ತು ಸಂಗ್ರಹಾಲಯ ಆರಂಭಿಸಲು ನಿರ್ಧರಿಸಲಾಗಿದೆ. ನಿತ್ಯವೂ ಲಕ್ಷಾಂತರ ಭಕ್ತರನ್ನು ಸೆಳೆಯುತ್ತಿರುವ ಅಯೋಧ್ಯೆಯಲ್ಲಿ ಈ ವಸ್ತುಸಂಗ್ರಹಾಲಯವೂ ಆಕರ್ಷಣೀಯ ಸ್ಥಳಗಳಲ್ಲೊಂದಾಗುತ್ತದೆ. ಈ ಮ್ಯೂಸಿಯಂ ನಿರ್ಮಿಸುವ ಬಗ್ಗೆ ಟಾಟಾ ಸನ್ಸ್ ಪ್ರಸ್ತಾವನೆಗೆ ಉತ್ತರ ಪ್ರದೇಶ ಕ್ಯಾಬಿನೆಟ್ ಅನುಮೋದನೆ ನೀಡಿದೆ. ಇದಕ್ಕಾಗಿ ಅಗತ್ಯವಾದ ಜಾಗವನ್ನು 1 ರೂ. ಶುಲ್ಕಕ್ಕೆ 90 ವರ್ಷಗಳ ಕಾಲ ಟಾಟಾ ಸನ್ಸ್‌ಗೆ ಗುತ್ತಿಗೆ ನೀಡಲಾಗುವುದು. ಭಾರತದಲ್ಲಿರುವ ಪ್ರಮುಖ ದೇಗುಲಗಳ ಬಗ್ಗೆ ಮಾಹಿತಿ ನೀಡಲು ಮತ್ತು ಸನಾತನ ಧರ್ಮದ ಬಗ್ಗೆ ತಿಳಿಸಿಕೊಡಲು ಈ ಮ್ಯೂಸಿಯಂ ನಿರ್ಮಿಸಲಾಗುತ್ತಿದೆ. ಈ ದೇಗುಲಗಳ ವಸ್ತು ಸಂಗ್ರಹಾಲಯವು ಪ್ರಮುಖವಾಗಿ 12 ಗ್ಯಾಲರಿಗಳನ್ನು ಒಳಗೊಂಡಂತೆ ವಿನ್ಯಾಸ ಮಾಡಲಾಗುವುದು. 12 ಗ್ಯಾಲರಿಗಳ ಹೊರತಾಗಿ, ವಸ್ತುಸಂಗ್ರಹಾಲಯವು ಸುಂದರವಾದ ಉದ್ಯಾನವನ, ಕೆಫೆಟೇರಿಯಾ, ಕೊಳ ಮತ್ತು ನೆಲಮಾಳಿಗೆಯ ಪಾರ್ಕಿಂಗ್ ಅನ್ನು ಸಹ ಒಳಗೊಂಡಿರಲಿದೆ.

## ಹಿಂದುಗಳೇ ಅಲ್ಪಸಂಖ್ಯಾತರಾಗುತ್ತಾರೆ: ಅಲಹಬಾದ್ ಹೈಕೋರ್ಟ್



ಮತಾಂತರದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅಲಹಾಬಾದ್ ಹೈಕೋರ್ಟ್, 'ಹೀಗೇ ಮತಾಂತರ ಮುಂದುವರಿಯುತ್ತಾ ಹೋದರೆ ಬಹುಸಂಖ್ಯಾತರು ಅಲ್ಪ ಸಂಖ್ಯಾತರಾಗುತ್ತಾರೆ' ಎಂದು ಆತಂಕ ವ್ಯಕ್ತಪಡಿಸಿದೆ. ಹಲವು ಹಿಂದೂ ಧರ್ಮೀಯ ಗ್ರಾಮಸ್ಥರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಿದ ಆರೋಪ ಹೊತ್ತಿರುವ ಕೈಲಾಸ್ ಎಂಬುವನ ಜಾಮೀನು ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರ ಪೀಠ, ಈ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. 'ಭಾರತವಾಸಿಗಳ ಧರ್ಮವನ್ನು ಬದಲಿಸುವಂತಹ ಧಾರ್ಮಿಕ ಸಭೆಗಳನ್ನು ಕೂಡಲೇ ನಿಲ್ಲಿಸಬೇಕು. ಇಲ್ಲವಾದಲ್ಲಿ ಇಂದು ಬಹುಸಂಖ್ಯಾತರಾಗಿರುವವರು ಮುಂದೊಂದು ದಿನ ಅಲ್ಪಸಂಖ್ಯಾತರಾಗುತ್ತಾರೆ. ಪ್ರಚಾರ ಎಂದರೆ ಧರ್ಮವನ್ನು ಉತ್ತೇಜಿಸುವುದೇ ಹೊರತು ವ್ಯಕ್ತಿಗಳ ಧರ್ಮಪರಿವರ್ತಿ ಸುವುದಲ್ಲ' ಎಂದು ಕೋರ್ಟ್ ಬುದ್ಧಿಮಾತು ಹೇಳಿದೆ. 'ಮತಾಂತರಕ್ಕಾಗಿ ನಡೆಯುವ ಧಾರ್ಮಿಕ ಸಮಾವೇಶಗಳು ಸಂವಿಧಾನದ 25ನೇ ವಿಧಿಯ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸುವ ಕಾರಣ ಅವುಗಳನ್ನು ನಿಷೇಧಿಸಬೇಕು. ಭಾರತೀಯ ಸಂವಿಧಾನ ಆತ್ಮಸಾಕ್ಷಿಯ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಅನುಸರಣಾ ಸ್ವಾತಂತ್ರ್ಯ, ಧರ್ಮ ಪ್ರಚಾರ ಸ್ವಾತಂತ್ರ್ಯವನ್ನು ನೀಡಿದ್ದರೂ, ಒಂದು ನಂಬಿಕೆಯಿಂದ ಇನ್ನೊಂದು ನಂಬಿಕೆಗೆ ಮತಾಂತರಗೊಳ್ಳಲು ಅವಕಾಶ ನೀಡುವುದಿಲ್ಲ, ಇಲ್ಲಿ ಪ್ರಚಾರ ಅಥವಾ ಪ್ರಸರಣದ ಅರ್ಥವೆಂದರೆ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡುವುದೆಂದಲ್ಲ' ಎಂದು ನ್ಯಾಯಾಲಯ ಸ್ಪಷ್ಟಪಡಿಸಿತು.

## ಪ್ರಾಣಿ ಪ್ರಭೇದಗಳ ಪಟ್ಟಿ ಸಿದ್ಧಪಡಿಸಿದ ಭಾರತ

ಕೊಲ್ಕತಾ: ತನ್ನ ಭೂ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಪ್ರಾಣಿ ಪ್ರಭೇದಗಳ ಸಮಗ್ರ ಪಟ್ಟಿಯನ್ನು ಭಾರತ ಸಿದ್ಧಪಡಿಸಿದೆ. ಈ ಮೂಲಕ ಸಂಪೂರ್ಣ ಪ್ರಾಣಿ ಪ್ರಭೇದಗಳನ್ನು ಪಟ್ಟಿಮಾಡಿದ ಏಕೈಕ ದೇಶವಾಗಿ ಭಾರತ ಹೊರಹೊಮ್ಮಿದೆ. 'ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ'ದ 109ನೇ ಸಂಸ್ಥಾಪನಾ ದಿನಾಚರಣೆ ನಿಮಿತ್ತ ಕೋಲ್ಕೊತಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರು ಪ್ರಾಣಿ ಪ್ರಭೇದಗಳ ಸರ್ವೇಕ್ಷಣೆ ಕುರಿತ ಪೋರ್ಟಲ್‌ಗೆ ಚಾಲನೆ ನೀಡಿ ಈ ವಿಷಯ ಪ್ರಕಟಿಸಿದರು. ಭಾರತದಲ್ಲಿರುವ ಪ್ರಾಣಿ ಪ್ರಭೇದಗಳ ಕುರಿತ ಸಂಪೂರ್ಣ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಪಟ್ಟಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಪ್ರಾಣಿ ಪ್ರಭೇದಗಳ ಉಲ್ಲೇಖವಿದೆ. ಈ ಸಮಗ್ರ ದಾಖಲೆಯು ಜೀವ ವೈವಿಧ್ಯತೆ ಮಾಹಿತಿ ದಾಖಲೀಕರಣದಲ್ಲಿ ದೇಶವನ್ನು ಜಾಗತಿಕವಾಗಿ ಮುಂಚೂಣಿಯಲ್ಲಿ ನಿಲ್ಲಿಸಿದೆ. ಈ ದಾಖಲಾತಿಯು ಪ್ರಾಣಿಶಾಸ್ತ್ರ ತಜ್ಞರು, ಶಿಕ್ಷಣ ತಜ್ಞರು, ಸಂಶೋಧಕರು, ನೀತಿ ನಿರೂಪಕರಿಗೆ ಜ್ಞಾನಭಂಡಾರವಾಗಿ ನೆರವಿಗೆ ಬರಲಿದೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.